# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66/2021

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಕೃಷ್ಣಪ್ಪ | ಪ್ರಾಸಾಃ | 17 |
| **ತಂದೆಯ ಹೆಸರುಃ** | ವೆಂಕಟಪ್ಪ | ಚಾಸಾಃ | 33 |
| **ವಯಸ್ಸುಃ** | 62 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ನಿವೃತ್ತ ಪಿ.ಎಸ್.ಐ | | |
| **ವಾಸ ಸ್ಥಳಃ** | ಮುಳಬಾಗಿಲು | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ.*20.03.2021* ರಂದು ನಾನು ಶಿಡ್ಲಘಟ್ಟ ನಗರ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮದ್ಯಾಹ್ನ *02.30* ಕ್ಕೆ ಚಾಸಾ-*35* ರವರೊಂದಿಗೆ ಠಾಣಾ ಮುಂಭಾಗದಲಲ್ ನಿಂತಿದ್ದಾಗ ಸರ್ಕಾರಿ ಆಸ್ಪತ್ರೆ ಮುಂಭಾಗ ಗಲಾಟೆ ಶಬ್ಧ ಕೇಳಿಸಿದ್ದು, ನಾನು ಚಾಸಾ-*35* ರೊಂದಿಗೆ ಅಲ್ಲಿಗೆ ಧಾವಿಸಲಾಗಿ ಅಲ್ಲಿಂದ ಒಂದು ಓಮಿನಿ ಕೆಎ-*40*-ಎಂ-*1633* ವೇಗದಿಂದ ನಮ್ಮನ್ನು ಹಾದು ಹೋಗಿದ್ದು ನಿಲ್ಲಿಸುವಂತೆ ಸೂಚಿಸಿದ್ದರು ಸಹ ನಿಲ್ಲಿಸದಿದ್ದಾಗ ಚಾಸಾ-*35* ರವರು ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ವ್ಯಾನ್ ನ ಡೋರ್ ಗೆ ಹೊಡೆದಿದ್ದು, ಚಾಸಾ-*34* ರವರು ಸಹ ಲಾಟಿಯಿಂದ ವ್ಯಾನ್ ನಿಲ್ಲಿಸಲು ಪ್ರಯತ್ನಿಸಿದ್ದರು ಸಹ ಸದರಿ ವ್ಯಾನ್ ವೇಗವಾಗಿ ಆತನ ಪ್ರಾಣಕ್ಕ ಅಪಾಯವಾಗುವಂತೆ ಚಾಲನೆ ಮಾಡಿ ಅಲ್ಲಿಂದ ಹೊರಟು ಹೋಯಿತು. ನಂತರ ಚಿತಾ ಬೈಕ್ ನಲ್ಲಿ ಚಾಸಾ-*34* ಮತ್ತು ಚಾಸಾ-*35* ರವರು ಅದನ್ನು ಹಿಂಬಾಲಿಸಿದ್ದರು ಸಹ

ಸದರಿ ವ್ಯಾನ್ ಹಿಡಿಯಲು ಆಗಲಿಲ್ಲ. ಸದರಿ ವ್ಯಾನ್ ನಲ್ಲಿ *4* ಜನ ಇದ್ದುದ್ದನ್ನು ಗಮನಿಸಿದ್ದೇವು.

ನಂತರ ನಾನು ಆಸ್ಪತ್ರೆ ಬಳಿ ಹೋಗಿ ನೋಡಲಾಗಿ ಒಂದು ಮೃತ ದೇಹ ಬಿದ್ದಿದ್ದು , ಆತ ಅಮ್ಜದ್ ಎನ್ನುವ ಪರಿಚಿತ ವ್ಯಕ್ತಿಯಾಗಿದ್ದ. ಆತನ ಮೈ ಮೇಲೆ ಗಾಯಗಳಾಗಿದ್ದವು . ಶವವನ್ನು ಆಸ್ಪತ್ರೆಗೆ ರವಾನಿಸಿದ್ದೇವು. ಒಂದು ದಿನದ ನಂತರ ಆರೋಪಿಗಳನ್ನು ಬಂಧಿಸಿದಾಗ ಮೃತನಿಗೂ ಹಾಗೂ *1* ನೇ ಆರೋಪಿಗು ವೈಶಮ್ಯಗಳಿದ್ದು, ಆತನ ಕಡೆಯವರು ಕೊಲೆ ಮಾಡಿದ್ದಾಗ ತಿಳಿದು ಬಂತು. ವ್ಯಾನ್ ನಲ್ಲಿದ್ದ *4* ಜನ ಆರೋಪಿತರು *3, 4, 6* ಮತ್ತು *7* ನೇ ಆರೋಪಿತರಾಗಿದ್ದರು ಎಂದು ತನಿಖೆಯಲ್ಲಿ ತಿಳಿದು ಬಂತು. ಆ ದಿನ ವ್ಯಾನ್ ಗೆ ಎತ್ತಿ ಹಾಕಿದ್ದ ಕಲ್ಲು ಈಗ ನೋಡುತ್ತಿದ್ದು ಮು.ಮಾ.*30* ಎಂದು ಗುರುತಿಸಲಾಯಿತು. ರೆಡ್ಡಪ್ಪ ಹಿಡಿದಿದ್ದ ಲಾಟಿಯನ್ನು ನೋಡಿದರೆ ಗುರುತಿಸಬಲ್ಲೆ.

**<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ.ಬಿ.ಎಸ್. ವಕೀಲರಿಂದ ಪಾಟೀ ಸವಾಲು</u>**

ನಾನು 35 ವರ್ಷ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ನಾನು ಇಲಾಖೆಗೆ ಕಾನ್ ಸ್ಟೇಬಲ್ ಆಗಿ ಸೇರಿಕೊಂಡು ಸಬ್ ಇನ್ಸ್ ಪೆಕ್ಟರ್ ಆಗಿ ನಿವೃತ್ತಿ ಆಗಿದ್ದೇನೆ. ನನಗೆ ಪ್ರತಿಯೊಂದು ಹಂತದ ಅಧಿಕಾರಿಯ ಕಾರ್ಯವ್ಯಾಪ್ತಿ ಗೊತ್ತು. ಘಟನಾ ಸಮಯದಲ್ಲಿ ನಾನು ಎ.ಎಸ್.ಐ ಆಗಿದ್ದೆ. ಆ ದಿನ ನನಗೆ ನಗರ ದಸ್ತು ನಿರ್ವಹಿಸುವಂತೆ ಸೂಚಿಸಲಾಗಿತ್ತು. ಘಟನಾ ಸ್ಥಳ ಠಾಣೆಯಿಂದ 400 ಅಡಿ ದೂರ. ನಮ್ಮ ಠಾಣೆ ರಸ್ತೆಗೆ ಹೊಂದಿಕೊಂಡಂತೆ ಇದೆ. ರಸ್ತೆಯಿಂದ 5 ಅಡಿ ದೂರದಲ್ಲಿ ಕಾಂಪೌಂಡ್ ಇದೆ. ಅಲ್ಲಿಂದ

25 ಅಡಿ ದ್ವಾರದಲ್ಲಿ ಆಯುಧ ಸಹಿತ ಸೆಂಟ್ರಿ ಕಾರ್ಯ ನಿರ್ವಹಿಸುತ್ತಾನೆ ಎಂದರೆ ಸರಿ. ಆ ದಿನ ಸೆಂಟ್ರಿ ಯಾರಿದ್ದರೆಂದು ನೆನಪಿಲ್ಲ. ಆ ದಿನ ನಾನು ಚಾಸಾ-35 ರಸ್ತೆಯಲ್ಲಿ ಮಾತನಾಡುತ್ತಾ ನಿಂತಿದ್ದೇವು. ಆತ ಆಗ ಆಪೀಸ್ ನಿಂದ ಕೆಳಗೆ ಬಂದ. ನಮ್ಮ ಬಳಿ ಆಯುಧಗಳು ಇರಲಿಲ್ಲ.

ರಸ್ತೆಯ ಆಗು ಹೋಗುಗಳು ಠಾಣೆಯ ಸಿಸಿ ಕ್ಯಾಮರಾದಲ್ಲಿ ದಾಖಲಾಗುತ್ತದೆ ಎಂದರೆ ಸರಿ. ನಾವು ನಿಂತಿದ್ದು ಹಾಗೂ ವಾಹನ ಹೋಗಿದ್ದು ಕೂಡ ದಾಖಲಾಗಿರುತ್ತದೆ ಎಂದರೆ ಸರಿ. ರೈಲ್ವೆಬ್ರಿಡ್ಜ್ ನಿಂದ ಪೋಲಿಸ್ ಠಾಣೆ ಕಡೆ ರಸ್ತೆ ಏರು ಮುಖವಾಗಿದ್ದು, ಹಂಪ್ಸ್ ಕೂಡ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ 10 ರಿಂದ 20 ಕಿ.ಮೀ. ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿ. 1 ನೇ ಗೇರ್ ನಲ್ಲಿ ಮಾತ್ರ ಓಡಿಸಬಹುದು ಎಂದರೆ ನನಗೆ ಗೊತ್ತಿಲ್ಲ. ಆ ದಿನ ವ್ಯಾನ್ ಎಷ್ಟು ವೇಗದಲ್ಲಿತ್ತು ಎಂದು ನನಗೆ ಗೊತ್ತಿಲ್ಲ. 30 ಕಿ.ಮೀ. ಹೆಚ್ಚಿನ ವೇಗದಲ್ಲಿತ್ತು. ವಾಹನಗಳ ವೇಗ ಹೆಚ್ಚು ಮಾಡಲು ಗೇರ್ ಬದಲಿಸಬೇಕಾಗಿರುತ್ತದೆ ಎಂದರೆ ಸರಿ. ಠಾಣೆಯಿಂದ ಮುಂದೆ ತಾಲೂಕು ಕಚೇರಿ ಬಳಿ ತಿರುವು ಇದೆ ಎಂದರೆ ಸರಿ. ಸದರಿ ರಸ್ತೆ ವಾಹನ ಹಾಗೂ ಜನ ಸಂದಣಿಯಿಂದ ಕೂಡಿರುತ್ತದೆ ಎಂದರೆ? ಇರಬಹುದು. ಅಲ್ಲಿ ವೇಗಾವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನಾವು ಅನುಮಾನದಿಂದ ಸದರಿ ವಾಹನವನ್ನು ನಿಲ್ಲಿಸಲು ಪ್ರಯತ್ನಿಸಿದ್ದೇವು. ಘಟನೆ

ನಡೆದಿದ್ದು ನಮಗೆ ಕಾಣಿಸುತ್ತಿತ್ತು , ಶಬ್ಧ ಕೇಳಿಸುತ್ತಿತ್ತು. ನಾನು ನಿಂತಿದ್ದ ಜಾಗದಿಂದ ಹೆಣ ಬಿದ್ದ ಸ್ಥಳ 30 ರಿಂದ 40 ಅಡಿ ಇದೆ ಎಂದರೆ ಸರಿಯಲ್ಲ. 300 ರಿಂದ 400 ಅಡಿ ಇರಬಹುದು. ನಾವು ಘಟನೆಯನ್ನು ಗಮನಿಸಿ ಆ ಕಡೆ ಓಡಿದೇವು. ಮುಕ್ಕಾಲು ಭಾಗದಷ್ಟು ಹೋಗಿದ್ದೇವು. ನಾವು ವ್ಯಾನ್ ಅಡ್ಡಲಾಗಿ ಓಡಿದೆವು. ಎಷ್ಟು ಅಡಿ ಓಡಿದ್ದೆವು ಎಂದು ಹೇಳಲಾಗುವುದಿಲ್ಲ. ಮುಕ್ಕಾಲು ಭಾಗ ಕ್ರಮಿಸಿದ್ದೇವು. ಅಲ್ಲಿ ವ್ಯಾನ್ ಅಡ್ಡ ಬಂತು. ನಾನು ಸ್ಥಳಕ್ಕೆ ಹೋದಾಗ ಸಾರ್ವಜನಿಕರಿದ್ದರು. ನಾನು ಪೋನ್ ಮಾಡಿ ಸಿಬ್ಬಂಧಿ ಕರೆಸಿದ್ದೆ. ಆ ಸಮಯದಲ್ಲಿ ಠಾಣೆಯಲ್ಲಿ ಸೆಂಟ್ರಿ ಹಾಗೂ ಎಸ್.ಹೆಚ್.ಒ ಮಾತ್ರ ಇದ್ದರು. ಅವರು ಬರಲಿಲ್ಲ. 10-15 ನಿಮಿಷಗಳಲ್ಲಿ ಇತರೆ ಸಿಬ್ಬಂಧಿ ಬಂದರು. ಘಟನೆಯ ಬಗ್ಗೆ ತಕ್ಷಣ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದೆ. ವಿಪರೀತ ಜನಸಂದಣಿ ಇದ್ದುದ್ದರಿಂದ ದಾಖಲಿಸಲಿಲ್ಲ. ಠಾಣೆಗೆ ಹಿಂದಿರುಗಿದಾಗ ಎಸ್.ಹೆಚ್.ಒ ಗೆ ವರದಿ ನೀಡಿದ್ದೆ. ಆಗ ಎಷ್ಟು ಸಮಯವಾಗಿತ್ತು ಎಂದು ನೆನಪಿಲ್ಲ. ಎಸ್.ಹೆಚ್.ಒ. ಠಾಣಾ ಡೈರಿಯಲ್ಲಿ ಅದನ್ನು ಬರೆದಿರುತ್ತಾರೆ. ವರದಿಯಲ್ಲಿ ವಾಹನದ ಸಂಖ್ಯೆನಮೂದಿಸಿದೆ.

ಆ ದಿನ ನಾನು ಅಥವಾ ಚಾಸಾ-35 ಠಾಣೆಯ ಮುಂದೆ ನಿಂತಿರಲಿಲ್ಲ , ಯಾವುದೇ ವಾಹನ ನಮ್ಮನ್ನು ಹಾದು ಹೋಗಿಲ್ಲ , ನಾವು ತಡೆಯುವ ಪ್ರಯತ್ನವೇ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-35 ಮಾರ್ನಾಲ್ಕು ಅಡಿ ದೂರದಿಂದ ಮು.ಮಾ.30 ನ್ನು ಎಸೆದಿದ್ದರು. ಸದರಿ ಕಲ್ಲಿಗೆ ನಾವು ವಿಶಿಷ್ಠ ಗುರುತು ಮಾಡಿರಲಿಲ್ಲ. ಮು.ಮಾ.30 ನ್ನು ವ್ಯಾನ್ ಕಡೆ

ಎಸೆದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕೈಯಲ್ಲಿ ಆಯುಧ ಇಲ್ಲದ ಕಾರಣ ಲಾಟಿಯಿಂದ ವ್ಯಾನ್ ತಡೆಯಲು ಪ್ರಯತ್ನಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನನು ಗಸ್ತು ಕರ್ತವ್ಯಕ್ಕೆ ನಿಯೋಜಿಸಿರಲಿಲ್ಲ , ನಾನು ಠಾಣೆಯ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ್ದ 4 ಆರೋಪಿಗಳು ವ್ಯಾನ್ ನಲ್ಲಿ ಇರಲಿಲ್ಲ , ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಪಿಶಯಾದಿ ಹಾಗೂ ತನಿಖಾಧಿಕಾರಿಯವರೊಂದಿಗೆ ಶಾಮೀಲಾಗಿ ಸುಳ್ಳು ಕತೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. **(1, 4 ರಿಂದ 7 ಮತ್ತು 9 ನೇ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲು ಅನುಮೋದಿಸಿದ್ದಾರೆ).**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.